ಕಾಲೇಜಿಗೆ ಕೊಠಡಿ ಮತ್ತು ಶೌಚಾಲಯಗಳ ಲಭ್ಯತೆ

2467(2778); ಶ್ರೀ ಗೋಪಾಲ ಪೂಜಾರಿ ಕೆ.

ಅ) ಬೈಂದೂರು ಪದವಿ ಕಾಲೇಜಿನಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು (ವಿಭಾಗವಾರು, ಲಿಂಗವಾರು ವಿವರ ನೀಡುವುದು)?

ಆ) ಕಾಲೇಜಿನಲ್ಲಿ ಎಷ್ಟು ಕೊಠಡಿಗಳು ಮತ್ತು ಶೌಚಾಲಯಗಳಿವೆ;

ಇ) ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಕೊಠಡಿಗಳ ಸ್ಥಳಾವಕಾಶ ಮತ್ತು ಶೌಚಾಲಯಗಳು ಲಭ್ಯವಿದೆಯೇ;

ಈ) ಲಭ್ಯವಿಲ್ಲದಿದ್ದಲ್ಲಿ, ಕೊಠಡಿಗಳು ಮತ್ತು ಶೌಚಾಲಯಗಳ ಬೇಡಿಕೆಗೆ ಪ್ರಸ್ತಾವನೆ ಸಲ್ಲಿಕೆಯಾಗಿದೆಯೇ;

ಉ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಆರ್.ವಿ. ದೇಶ್‌ಪಾಂಡೆ (ಮಾನ್ಯ ಉನ್ನತ ಶಿಕ್ಷಣ ಸಚಿವರು)

ಅ) 2014–15ನೇ ಸಾಲಿನಲ್ಲಿ ಬೈಂದೂರು ಪದವಿ ಕಾಲೇಜಿನಲ್ಲಿ ಒಟ್ಟು 672 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಕಾಲೇಜಿನಲ್ಲಿನ ವಿಭಾಗವಾರು/ಲಿಂಗವಾರು ವಿವರಗಳು:

ಕ್ರ.ಸಂ.	ವಿಭಾಗ	ವಿದ್ಯಾರ್ಥಿ	ವಿದ್ಯಾರ್ಥಿನಿಯರು	ಒಟ್ಟು
1	ಬಿ.ಎ	60	134	194
2	ಬಿ.ಕಾಂ	192	182	374
3	ಬಿ.ಬಿ.ಎಂ	46	58	104

ಆ) 14 ತರಗತಿ ಕೊಠಡಿಗಳು, ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಶೌಚಾಲಯಗಳು ಹಾಗೂ ಮಹಿಳಾ ವಿಶ್ರಾಂತಿ ಗೃಹ ಇರುತ್ತದೆ.

ಇ) ಪ್ರಸ್ತುತ 672 ವಿದ್ಯಾರ್ಥಿಗಳಿಗೆ ಲಭ್ಯವಿರುವ 14 ಕೊಠಡಿಗಳಲ್ಲಿ ತರಗತಿಗಳನ್ನು ನಡೆಸಲಾಗುತ್ತಿದ್ದು, ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿರುತ್ತದೆ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾದ ಶೌಚಾಲಯಗಳು ಇರುತ್ತವೆ.

ಈ) ಹೌದು.

ಉ) 2014–15ನೇ ಸಾಲಿನಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಇಡಿ/73/ ಹೆಚ್‌ಪಿಸಿ/2014 ದಿ:08/12/2014ರಲ್ಲಿ 03 ತರಗತಿ ಕೊಠಡಿಗಳನ್ನು ರೂ. 52 ಲಕ್ಷಗಳ ಅಂದಾಜಿನಲ್ಲಿ ನಿರ್ಮಿಸಲು ಅನುಮೋದನೆಯಾಗಿದ್ದು, ದಿನಾಂಕ:26/02/2015ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.

ಗ್ರಾಮ ಪಂಚಾಯತ್‌ಗಳಿಗೆ ಕಟ್ಟಡ ಮತ್ತು ಪೀಠೋಪಕರಣಗಳು

2468(2779); ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು)

ಅ) ಕುಂದಾಪುರ ತಾಲೂಕಿನ ವ್ಯಾಪ್ತಿಯಲ್ಲಿ ಹೊಸದಾಗಿ ಎಷ್ಟು ಗ್ರಾಮ ಪಂಚಾಯತ್ ಗಳನ್ನು ರಚಿಸಲಾಗಿದೆ; ಅವುಗಳು ಯಾವುವು;

ಆ) ಹೊಸದಾಗಿ ರಚನೆಯಾದ ಗ್ರಾಮ ಪಂಚಾಯತ್‌ಗಳಿಗೆ ಕಛೇರಿ ಕಟ್ಟಡ, ಪೀಠೋಪಕರಣಗಳು ಹಾಗೂ ಸಿಬ್ಬಂದಿಗಳ ವ್ಯವಸ್ಥೆ ಕಲ್ಪಿಸಲಾಗಿದೆಯೇ;

ಇ) ಹಾಗಿದ್ದಲ್ಲಿ, ಅವುಗಳ ವಿವರಗಳನ್ನು ನೀಡುವುದು.

ಈ) ನೀಡದಿದ್ದಲ್ಲಿ, ಸದರಿ ಸೌಕರ್ಯಗಳನ್ನು ಯಾವಾಗ ಕಲ್ಪಿಸಲಾಗುವುದು. ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;